# ಗಾಂಧಿ ಸ್ಮರಣ ಭೂಮಿ

ರಾಜ್‌ಘಾಟ್ ಗೇಟಿನಿಂದ ಒಳಪ್ರವೇಶಿಸಿದರೆ ಕಣ್ಣಿಗೆ ತಂಪೆನಿಸುವ ಹಸಿರು ಹಾಸಿನ ವಿಶಾಲ ಪ್ರದೇಶ. ಪಕ್ಕದಲ್ಲಿ ಚಿಮ್ಮುವ ಕಾರಂಜಿಗಳು. ಮುಂದುವರೆದು ಮೆಟ್ಟಿಲೇರಿ ಇಳಿಯುತ್ತಿದ್ದಂತೆಯೇ ಕಾಣುವ, ಕರಿ ಕಲ್ಲಿನಿಂದ ನಿರ್ಮಿಸಿದ ಚೌಕಾಕಾರದ ಪ್ಲಾಟ್‌ಫಾರ್ಮ್.

■ ಚಿತ್ರ–ಲೇಖನ: **ಜಿ. ಆರ್. ಪಂಡಿತ್**




ಸುಮಾರು 44.35 ಎಕರೆಗಳಷ್ಟು ವಿಸ್ತೀರ್ಣದ ರಾಜ್ ಘಾಟ್, ದೆಹಲಿಯ ವರ್ತುಲ ರಸ್ತೆ ಹಾಗೂ ಯಮುನಾ ನದಿಯ ದಡದ ಮಧ್ಯದಲ್ಲಿದೆ. ಜನಪಥ್ ರಸ್ತೆಯಿಂದ ಕೇವಲ 4 ಕಿಲೋಮೀಟರ್ ದೂರ. ಆಗ್ನೇಯ ದಿಕ್ಕಿನಲ್ಲಿ ದೆಹಲಿಯ ಪ್ರಸಿದ್ಧ ಕೆಂಪುಕೋಟೆ ಇದೆ. ರಾಜ್‌ಘಾಟ್, ಗಾಂಧೀಜಿಯವರ ಸ್ಮಾರಕವಿರುವ ಹಸಿರು ಹಾಸಿನ ಸುಂದರ ಸ್ಥಳ. 31ಜನವರಿ 1948 ರಂದು ನಾಥೂರಾಂ ಗೋಡ್ಸೆ ಎಂಬ ಮತಾಂಧನ ಗುಂಡಿಗೆ ಬಲಿಯಾಗಿ ನೆಲಕ್ಕೊರಗಿದ ಮಹಾತ್ಮನ ಅಂತ್ಯಸಂಸ್ಕಾರ ನಡೆದ ಸ್ಥಳ. ಅಹಿಂಸೆಯನ್ನೇ ಅಸ್ತ್ರವಾಗಿಟ್ಟುಕೊಂಡು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ, ಬ್ರಿಟಿಷರ ದಾಸ್ಯದ ಸಂಕೋಲೆಯಿಂದ ನಮ್ಮ ದೇಶವನ್ನು ಮುಕ್ತಗೊಳಿಸಿದ ಸೇನಾನಿಗೆ ಈ ದೇಶ 'ಅಂತಿಮ ನಮನ' ಸಲ್ಲಿಸಿದ ಸ್ಥಳ.

ರಾಜ್‌ಘಾಟ್ ಗೇಟಿನಿಂದ ಒಳಪ್ರವೇಶಿಸಿದರೆ ಕಣ್ಣಿಗೆ ತಂಪೆನಿಸುವ ಹಸಿರು ಹಾಸಿನ ವಿಶಾಲ ಪ್ರದೇಶ. ಪಕ್ಕದಲ್ಲಿ ಚಿಮ್ಮುವ ಕಾರಂಜಿಗಳು. ಮುಂದುವರೆದು ಮೆಟ್ಟಿಲೇರಿ ಇಳಿಯುತ್ತಿದ್ದಂತೆಯೇ ಕಾಣುವ, ಕರಿ ಕಲ್ಲಿನಿಂದ ನಿರ್ಮಿಸಿದ ಚೌಕಾಕಾರದ ಪ್ಲಾಟ್‌ಫಾರ್ಮ್. ಅದೇ ಗಾಂಧೀಜಿಯವರ ಸ್ಮಾರಕ. ಹೂವಿನ ಸರಳ ಅಲಂಕಾರ. ಪ್ಲಾಟ್‌ಫಾರಂನ ಮಧ್ಯೆ ಸದಾ ಉರಿವ ಜ್ಯೋತಿ. ಪ್ರಶಾಂತ ಪರಿಸರ.

ಪ್ಲಾಟ್‌ಫಾರಂನ ಮುಂಭಾಗದಲ್ಲಿ 'ಹೇ ರಾಮ್' ಕೆತ್ತಲಾಗಿದೆ. ಗಾಂಧೀಜಿಯವರ ಸರಳತೆಯನ್ನು ಗಮನದಲ್ಲಿ ಇಟ್ಟುಕೊಂಡು ವನು ಜಿ ಭುಟಾ ಎಂಬ ವಾಸ್ತುಶಿಲ್ಪಿ ಅತ್ಯಂತ ಸರಳವಾಗಿ, ಅಷ್ಟೇ ಸುಂದರವಾಗಿ ನಿರ್ಮಿಸಿದ ಈ ಸ್ಮಾರಕಕ್ಕೆ ಪ್ರವಾಸಿಗರು ಭೇಟಿ ನೀಡುತ್ತಾರೆ. ಪಕ್ಕದಲ್ಲಿಯೇ ಗಾಂಧೀಜಿ ಸ್ಮಾರಕ ವಸ್ತು ಸಂಗ್ರಹಾಲಯವನ್ನು ನಿರ್ಮಿಸಿದ್ದು, ಗುರುವಾರ ಹೊರತು ಪಡಿಸಿ ಉಳಿದೆಲ್ಲಾ ದಿನ ಬೆಳಿಗ್ಗೆ 9.30 ರಿಂದ ಸಂಜೆ 5.30ರವರೆಗೂ ಗಾಂಧೀಜಿಯವರ ಜೀವನ ಸಾಧನೆ ಮತ್ತು ತಾತ್ವಿಕ